ಯಾವೊಂದು ಹಾಡುಗಳನ್ನೂ ಕೈಬಿಡುತ್ತಿರಲಿಲ್ಲ. ಇಡೀ ರಾತ್ರಿಯ ಪ್ರದರ್ಶನ ಬೆಳಿಗ್ಗೆ ತುಸು ತಡವಾದರೂ ಜನರು ಕದಲುತ್ತಿರಲಿಲ್ಲ. ಅವರ ಕೆಲಸಗಳನ್ನು ಮುಂದೂಡುತ್ತಿದ್ದರು. ಆದರೆ ಕಾಲಾನಂತರದಲ್ಲಿ ಜನರಿಗೆ ಕೆಲಸಗಳೇ ಮುಖ್ಯವಾಗಲಾರಂಭಿಸಿತು. ಅಲ್ಲದೆ, ಹಾಡಿನ ನಂತರ ಪಾತ್ರಗಳು ಪ್ರಸ್ತುತಪಡಿಸುವ ಮಾತುಗಳು ಮುಖ್ಯವಾಗತೊಡಗಿದವು. ಹಿಂದೆಲ್ಲ ಕಥೆಗಳು ಹಾಡಿನಲ್ಲಿಯೇ ಇರುತ್ತಿದ್ದುದರಿಂದ ಮಾತು ಎಂಬುದು ಹಾಡನ್ನು ಅರ್ಥೈಸಿಕೊಳ್ಳಲು ತುಸು ಸಹಾಯ ಮಾಡುವ ಕೀಲೆಣ್ಣೆಯಂತೆ ಮಾತ್ರ ಬಳಕೆಯಾಗುತ್ತಿತ್ತು. ಜನರ ಈಗಿನ ಒಲವನ್ನು ಗಮನಿಸಿ ನಾನು ಹಾಡುಗಳ ವಿಸ್ತಾರವನ್ನು ತುಸು ಕಡಿಮೆ ಮಾಡಿಕೊಂಡು, ಇಡೀ ಪ್ರಸ್ತುತಿಯಲ್ಲಿ ಸ್ವಲ್ಪ ವೇಗವನ್ನು ತಂದುಕೊಂಡೆ. ಒಂದು ಹಾಡನ್ನು ಮೊದಲು ಕ್ಷಿಪ್ರಗತಿಯಲ್ಲಿ ಹಾಡಿ ನಂತರ ನಿಧಾನವಾಗಿ ಹಾಡುತ್ತೇನೆ. ಇದರಿಂದ ಹಿರಿಯರೂ, ಯುವಜನರೂ ಇಷ್ಟಪಡುವಂತಾಯಿತು. ಜನರೋ ಮಾತುಗಳನ್ನೇ ಬಯಸುತ್ತಿದ್ದಾರೆ. ಹಾಗಾಗಿ ಮಾತಿಗೆ ಸ್ವಲ್ಪ ಹೆಚ್ಚು ಸಮಯ ನೀಡಲಾರಂಭಿಸಿದೆ. ಆದರೆ ಅಪ್ಪನಿಂದ ನನಗೆ ಬಂದ ಕಲಾಪ್ರಕಾರದ ಮೂಲ ಆಶಯಕ್ಕೆ ಧಕ್ಕೆ ಬಾರದಂತೆ ಪರಂಪರೆಯನ್ನು ಮುಂದಕ್ಕೊಯ್ಯಲು ಬದ್ಧನಾಗಿದ್ದೇನೆ.

ಅಪ್ಪನದ್ದು ಸಮರ್ಪಣಾ ಮನೋಭಾವ. ಅವರು ಪ್ರದರ್ಶನ ನೀಡಲು ಊರೂರಿಗೆ ತೆರಳುತ್ತಿದ್ದಾಗ, ಪ್ರತೀ ಊರಿನಲ್ಲಿ ಅವರನ್ನು ಬಹಳ ಗೌರವದಿಂದ ಸ್ವಾಗತಿಸುತ್ತಿದ್ದರು. ಸಿನಿಮಾ ಬಂದ ಮೇಲೆ ಕೂತ್ತುವಿನ ಜನಪ್ರಿಯತೆ ಕಡಿಮೆಯಾಯಿತು. ಅಪ್ಪ ಕಾಲವಾದ ಮೇಲೆ ನಾನು ತೆರುಕೂತ್ತುವನ್ನು ಕೈಬಿಟ್ಟು ರಾತ್ರಿಯಿಡೀ ನಡೆಸುವ ಕಟ್ಟೈಕೂತ್ತು ಪ್ರದರ್ಶನದತ್ತ ಹೆಚ್ಚು ಗಮನ ಹರಿಸಿದೆ. ಆಗ ಆ ಕಲಾಪ್ರಕಾರವನ್ನು ಇನ್ನಷ್ಟು ಚೆಂದಗಾಣಿಸಲು ಸಾಧ್ಯವಾಯಿತು.

◆ **ವೇದಿಕೆಯಲ್ಲಿ ಕರ್ಣನಾಗಿ, ದುರ್ಯೋಧನನಾಗಿ, ಕೃಷ್ಣನಾಗಿ ಪಾತ್ರಗಳನ್ನು ನಿರ್ವಹಿಸಿ ಮೆರೆದ ನಿಮಗೆ, ತಂಡದ ಯಜಮಾನಿಕೆಯ ಕೆಲಸ, ಕಥೆಗಳನ್ನು ಬರೆಯುವ ಕೆಲಸ ತೃಪ್ತಿಕೊಡುತ್ತದೆಯೇ?**

ವೇದಿಕೆಯಲ್ಲಿ ಕಲಾವಿದನಾಗಿ ಪ್ರದರ್ಶನ ನೀಡುವಾಗ ಯಾವುದಾದರೂ ಒಂದು ಪಾತ್ರದ ಬಗ್ಗೆ ಮಾತ್ರ ಗಮನಹರಿಸುತ್ತೇವೆ. ಆದರೆ ಹೊಸ ಕಥೆಗಳನ್ನು ಹೆಣೆಯುವಾಗ, ಹಾಡುಗಳು, ವೇಷಭೂಷಣ, ಕಾಲದ ಔಚಿತ್ಯ ಮುಂತಾದ ಅನೇಕ ವಿಚಾರಗಳತ್ತ ಗಮನಹರಿಸಬೇಕಾಗುತ್ತದೆ. ಯಾವ ಕೆಲಸವೂ ಹೆಚ್ಚಲ್ಲ, ಕಡಿಮೆಯಲ್ಲ. ಈ ನಿರ್ವಹಣೆಯ ಕೆಲಸ ಮಾಡುವವರನ್ನು ವಾದ್ಯಾರ್ ಅಥವಾ ಸೂತ್ರಧಾರ ಎಂದು ಹಿಂದೆ ಗುರುತಿಸುತ್ತಿದ್ದರು. ಈಗ ನಿರ್ದೇಶಕ ಎಂದು ಹೇಳುತ್ತಾರೆ.



ಶಿಷ್ಯನೊಡನೆ
ಪಿ.ರಾಜಗೋಪಾಲ್